**1ನೇ ಹೆಚ್ಚುವರಿ ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ., ರವರ ನ್ಯಾಯಾಲಯ, ನಂಜನಗೂಡು**

**ಸಿ.ಸಿಃ 404/2015**

| | | | |
|---|---|---|---|
| ಸಾಕ್ಷಿದಾರರ ಹೆಸರು | | ಪೂಣಚ್ಚ ಎನ್.ಎಂ | ಪ್ರಾಸಾಃ 3 |
| ತಂದೆಯ ಹೆಸರು | | ಮಂದಣ್ಣ | ಚಾಸಾಃ 9 |
| ವಯಸ್ಸು | | 50 ವರ್ಷ | |
| ಕೆಲಸ | | ಪೊಲೀಸ್ ಇನ್ಸ್ ಪೆಕ್ಟರ್ , ಪೊಲೀಸ್ ಪ್ರಧಾನ ಕಛೇರಿ, ಬೆಂಗಳೂರು | ಸಾ ಪ್ರ ಬೋ |
| ವಾಸ | | ಮೈಸೂರು | ದಿಃ 10.01.2024 |

**ಮುಖ್ಯ ವಿಚಾರಣೆ ಎ.ಪಿ.ಪಿ.ಯವರಿಂದಃ**

ನಾನು ಬದನವಾಳು ಪೋಲಿಸ್ ಠಾಣೆಯಲ್ಲಿ 11.03.2014 ರಿಂದ 09.06.2014 ರವರೆಗೂ ಪಿ.ಎಸ್.ಐ ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿನಾಂಕ 22.04.2014 ರಂದು ನಾನು ಈ ಕೇಸಿನ ಕಡತವನ್ನು ಚಾಸಾ-8 ರವರಿಂದ ಪಡೆದು ಪರಿಶೀಲಿಸಿ ತನಿಖೆಯನ್ನು ಮುಂದುವರೆಸಿರುತ್ತೇನೆ.

ದಿನಾಂಕ 12.05.2014 ರಂದು ಗಾಯಾಳು ಚಾಸಾ-1 ರವರ ಗಾಯದ ಪ್ರಮಾಣ ಪತ್ರವನ್ನು ನಂಜನಗೂಡು ಸರ್ಕಾರಿ ಆಸ್ಪತ್ರೆಯ ವೈದ್ಯರಿಂದ ಪಡೆದಿರುತ್ತೇನೆ.

ದಿನಾಂಕ 22.05.2014 ರಂದು ಸರ್ವೆ ನಂಬರ್ 101 ಮತ್ತು 102/1 ರ ಪಹಣಿ ಪತ್ರಿಕೆಗಳನ್ನು ತಾಲ್ಲೂಕು ಕಛೇರಿಯಿಂದ ಪಡೆದು ಕಡತಕ್ಕೆ ಅಳವಡಿಸಿರುತ್ತೇನೆ.

ದಿನಾಂಕ 23.05.2014 ಪ್ರಕರಣದಲ್ಲಿ ತನಿಖೆ ಪೂರ್ಣಗೊಂಡು ಆರೋಪಿತರ ವಿರುದ್ದ ಸಾಕಷ್ಟು ಸಾಕ್ಷ್ಯಾದಾರ ಇದ್ದುದರಿಂದಾಗಿ ಅವರುಗಳ ವಿರುದ್ದ ದೋಷಾರೋಪಣಾ ಪಟ್ಟಿ ಸಲ್ಲಿಸಿರುತ್ತೇನೆ.

ಈಗ ನನಗೆ ತೋರಿಸಿದ ದಾಖಲೆಯೂ ಚಾಸಾ-1 ರವರ ಗಾಯದ ಪ್ರಮಾಣ ಪತ್ರವಾಗಿದ್ದು ಅದರಲ್ಲಿ ನನ್ನ ರುಜು ಇದೆ. ಗಾಯದ ಪ್ರಮಾಣ ಪತ್ರವನ್ನು ನಿಪಿ-3 ಎಂದು, ಸಾಕ್ಷಿಯ ಸಹಿಯನ್ನು

ನಿಪಿ-3(ಎ) ಎಂದು ಗುರುತಿಸಲಾಯಿತು.

ಈಗ ನನಗೆ ತೋರಿಸಿದ ದಾಖಲೆಗಳು ನಾನು ಸ್ವೀಕರಿಸಿದ ಪಹಣಿ ಪತ್ರಿಕೆಗಳಾಗಿದ್ದು ಅವುಗಳಲ್ಲಿ ನನ್ನ ರುಜು ಇದೆ. ಪಹಣಿ ಪತ್ರಿಕೆಗಳನ್ನು ನಿಪಿ-4 ಮತ್ತು ನಿಪಿ-5 ಎಂದು ಮತ್ತು ಸಾಕ್ಷಿಯ ರುಜುವನ್ನು ನಿಪಿ-4(ಎ) ಮತ್ತು ನಿಪಿ-5(ಎ) ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ ಆರೋಪಿತರ ಪರ ಎಸ್.ಜಿ. ವಕೀಲರಿಂದಃ**

ಗಾಯದ ಪ್ರಮಾಣ ಪತ್ರವನ್ನು ನಮ್ಮ ಸಿಬ್ಬಂದಿ ಆಸ್ಪತ್ರೆಯಿಂದ ಪಡೆದು ತಂದಿದ್ದರು. ಚಾಸಾ-1 ರವರ ದೂರಿಗೆ ಸರಿಹೊಂದುವಂತೆ ಆರೋಪಿತರ ವಿರುದ್ದ ಸುಳ್ಳು ದೋಷಾರೋಪಣಾ ಪಟ್ಟಿಯನ್ನು ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

ನನ್ನ ಉಕ್ತಲೇಖನದ ಮೇರೆಗೆ ತೆರದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.

**ಓ ಹೇ ಕೇ ಸ ಇದೆ ಎಂ ಓ**

ಸಹಿ/-

**1ನೇ ಹೆಚ್ಚುವರಿ ಸಿ.ಜೆ ಮತ್ತು ಪ್ರದನ್ಯಾದಂ,**

**ನಂಜನಗೂಡು**